ಓ.ಎಸ್. ನಂಃ **251/2013**
**ಪಿ.ಡಬ್ಲ್ಯೂಃ 1**

ದಿನಾಂಕಃ 15-11-2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ 12 ರಿಂದ 18 ನೇ ಪ್ರತಿವಾದಿಯರ ಪರ ಶ್ರೀ ಐ ಎಂ ಆರ್ ವಕೀಲರಿಂದಃ**

ನನಗೆ ನನ್ನ ಜನ್ಮ ದಿನಾಂಕ ಗೊತ್ತಿಲ್ಲ. ಈ ದಾವೆ ದಾಖಲು ಮಾಡುವಾಗ ನನಗೆ ನನಗೆ 35 ವರ್ಷ ವಯಸ್ಸಾಗಿತ್ತು. ಸರ್ವೆ ನಂ.610-611 ರ ಜಮೀನಿಗೆ ಸಂಬಂಧಿಸಿದಂತೆ ಮಾತ್ರ ಈ ದಾವೆ ದಾಖಲು ಮಾಡಿದ್ದೇನೆ. ಸದರಿ ಜಮೀನಿನ ಚೆಕ್ ಬಂದಿ ನನಗೆ ಗೊತ್ತಿದೆ. ಪೂರ್ವಕ್ಕೆ ಜಮ್ಲಾರವರ ಜಮೀನು, ಪಶ್ಚಿಮಕ್ಕೆ ದೇವ್ಯಾರವರ ಜಮೀನು, ಉತ್ತರಕ್ಕೆ ರಾಮ್ ಜೇ ರವರ ಜಮೀನು ಹಾಗೂ ದಕ್ಷಿಣಕ್ಕೆ ಶಂಕರ ರವರ ಜಮೀನು ಇದೆ. ಈ ಚೆಕ್ ಬಂದಿಯನ್ನು ವಾದ ಪತ್ರದಲ್ಲಿ ಬರೆಸಿದ್ದೇನೆ. ಸದರಿ ಜಮೀನು ಈ ಹಿಂದೆ ನನ್ನ ತಂದೆಯ ಹೆಸರಿನಲ್ಲಿ ಇತ್ತು. ಅದರ ಪೂರ್ವದಲ್ಲಿ ನನ್ನ ತಾತ ಗಣ್ಯ ರವರ ಹೆಸರಿನಲ್ಲಿ ಇತ್ತು. ನನ್ನ ತಾತನ ಹೆಸರಿನಲ್ಲಿ ಇತ್ತು ಎಂಬುದನ್ನು ತೋರಿಸಲು ದಾಖಲೆ ಹಾಜರು ಮಾಡಿದ್ದೇನೆ. ನಾನು ಆ ರೀತಿ ಯಾವುದೇ ದಾಖಲೆ ಸಲ್ಲಿಸದೇ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

2. ಮೂಲ ವಾದ ಪತ್ರದಲ್ಲಿ ನನಗೆ 33 ವರ್ಷ ವಯಸ್ಸಾಗಿದೆ ಎಂದು ನಮೂದಿಸಿಕೊಂಡಿರುತ್ತೇನೆ ಎಂದರೆ ಸರಿ. ನನ್ನ ತಂದೆ ಕುಟುಂಬದ ಹಿರಿಯ ಆಗಿದ್ದರು ಎಂದರೆ ಸರಿ. ಮನೆಯ ನಿರ್ವಹಣೆ ನನ್ನ ತಂದೆ ಮಾಡುತ್ತಿದ್ದರು ಎಂದರೆ ಸರಿಯಲ್ಲ, ಸಾಕ್ಷಿಯು ನಾನೇ ಮಾಡುತ್ತಿದ್ದೆನು ಎಂದು ನುಡಿಯುತ್ತಾರೆ. ನಿಮ್ಮ ತಂದೆ ಎಷ್ಟು ಆಸ್ತಿ ಹೊಂದಿದ್ದರು ಎಂದರೆ ಸಾಕ್ಷಿಯು ಆತ ಹಿರಿಯುರಿಂದ ಬಂದ ಎರಡುವರೆ ಎಕರೆ ಆಸ್ತಿ ಹೊಂದಿದ್ದರು ಹಾಗೂ ನಾವು ಆತನ ಹೆಸರಿನಲ್ಲಿ 05 ಎಕರೆ ಖರೀದಿ ಮಾಡಿದ್ದೆವು ಎಂದು ನುಡಿಯುತ್ತಾರೆ. 1997 ರಲ್ಲಿ ನೀವು ಅಪ್ರಾಪ್ತ ವಯಸ್ಕರಾಗಿರುತ್ತೀರಿ ಎಂದರೆ ಸಾಕ್ಷಿಯು ಸರಿಯಲ್ಲ, ನನಗೆ ಆಗ 18 ವರ್ಷ ವಯಸ್ಸಾಗಿತ್ತು ಎಂದು ನುಡಿಯುತ್ತಾರೆ. ನನ್ನ ಜನನ ದಿನಾಂಕದ ದೃಡೀಕರಣ ದಾಖಲೆಯನ್ನು ನಾನು ಹಾಜರು ಮಾಡಿಲ್ಲ. 1997 ರಲ್ಲಿ ನನಗೆ 18 ವರ್ಷ ವಯಸ್ಸಾಗಿತ್ತು ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ತಂದೆ ಒಕ್ಕಲುತನ ಮಾಡುತಿತದ್ದರು ಎಂದರೆ ಸರಿ. ಜಮೀನು ಒಣ ಜಮೀನು ಆಗಿತ್ತು ಎಂದರೆ ಸರಿ. ಹೊಲದಿಂದ ಪ್ರತೀ ವರ್ಷಕ್ಕೆ ಎರಡು ಕ್ವಿಂಟಲ್ ತೊಗರಿ ಹಾಗೂ ಎರಡು

ಕ್ವಿಂಟಲ್ ಹೆಸರು ಬರುತ್ತಿತ್ತು. ನನ್ನ ತಂದೆ ಒಕ್ಕಲುತನ ಹೊರತು ಪಡಿಸಿ ಬೇರೆ ಯಾವುದೇ ಕೆಲಸ ಮಾಡುತ್ತಿರಲಿಲ್ಲ. ಹಾಗಾಗಿ ನಿಮ್ಮ ತಂದೆಗೆ ಬೇರೆ ಆದಾಯ ಇರಲಿಲ್ಲ ಎದರೆ ಸಾಕ್ಷಿಯು ಸರಿ, ನಾವು ದುಡಿಯುತ್ತಿದ್ದೆವು ಎಂದು ನುಡಿಯುತ್ತಾರೆ. ನಮ್ಮ ಕುಟುಂಬದ ಖರ್ಚು ವೆಚ್ಚಗಳನ್ನು ನನ್ನ ತಂದೆಯೇ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾವು ಮುಂಬೈಯಲ್ಲಿ ದುಡಿಯುತ್ತಿದ್ದೆವು ಎಂದು ನುಡಿಯುತ್ತಾರೆ. ನಾನು ಮುಂಬೈಯಲ್ಲಿ ಕೂಲಿ ಕೆಲಸ ಮಾಡುತ್ತಿದ್ದೆನು. ನಾನು ಹಾಗೂ ನನ್ನ ಅಣ್ಣ 10 ವರ್ಷಗಳ ವರೆಗೆ ಮುಂಬೈಯಲ್ಲಿ ಇದ್ದೆವು. ನಾನು 15 ವಯಸ್ಸಿನವನಾಗಿದ್ದಾಗ ಮುಂಬೈಗೆ ಹೋಗಿದ್ದೆನು. ನಾನು ಹಾಗೂ ನನ್ನ ಅಣ್ಣ ಆಗ ಮಾಸಿಕ ತಲಾ ರೂ.12,000 ಸಂಪಾದಿಸುತಿತದ್ದೆವು. ನಾವುಗಳು ಬಾಡಿಗೆ ಮನೆಯಲ್ಲಿ ಇದ್ದೆವು. ತಿಂಗಳಿಗೆ ರೂ.600 ಬಾಡಿಗೆ ಇತ್ತು. ನಾನು ಹಾಗೂ ನನ್ನ ಅಣ್ಣ ಬಾಂಬೆಯಲ್ಲಿ ದುಡಿದು ಹಣ ಸಂಪಾದಿಸುತ್ತಿದ್ದೆವು ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

3. ನನ್ನ ತಂದೆ ಕುಟುಂಬದ ಅಡಚಣೆಗಳಿಗಾಗಿ ದಾವಾ ಸರ್ವೆ ನಂ.610-611/ಎ ರಲ್ಲಿನ 22 ಗುಂಟೆ ಜಮೀನನ್ನು 12 ರಿಂದ 18 ನೇ ಪ್ರತಿವಾದಿಯರ ತಾಯಿ ಚಂದಮ್ಮ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ರೂ.5,500/- ಪ್ರತಿಫಲಕ್ಕೆ ಸದರಿ ಜಮೀನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಹಣ ಪಡೆದು ನನ್ನ ತಂದೆ ಖರೀದಿ ಪತ್ರ ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಖರೀದಿ ಪತ್ರದ ದಿನದಂದೇ ನನ್ನ ತಂದೆ ಜಮೀನು ಸ್ವಾದೀನ ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಈವರೆಗೆ ನಾವೇ ಸ್ವಾದೀನದಲ್ಲಿದ್ದೇವೆ ಎಂದು ನುಡಿಯುತ್ತಾರೆ. ಖರೀದಿ ಪತ್ರದ ಪ್ರಕಾರ ಚಂದಮ್ಮ ರವರ ಹೆಸರಿಗೆ ಹಕ್ಕು ಬದಲಾವಣೆ ಆಗಿದೆ ಎಂದರೆ ಸಾಕ್ಷಿಯು ನಾವು ಮಾಡಿಕೊಟ್ಟಿಲ್ಲ, ಅದು ಹೇಗೆ ಆಗಿದೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಚಂದಮ್ಮ ತೀರಿಕೊಂಡ ನಂತರ ಅವರ ಮಕ್ಕಳಾದ 12 ರಿಂದ 18 ನೇ ಪ್ರತಿವಾದಿಯರು ಸದರಿ ಜಮೀನಿನ ಮಾಲಿಕರು ಹಾಗೂ ಕಬ್ಜೆದಾರರಾಗಿರುತ್ತಾರೆ ಎಂದರೆ ಸರಿಯಲ್ಲ. ನಂತರ 12 ರಿಂದ 18 ನೇ ಪ್ರತಿವಾದಿಯರ ಹೆಸರಿಗೆ ಹಕ್ಕು ಬದಲಾವಣೆ ಆಗಿದೆ ಎಂದರೆ ಸಾಕ್ಷಿಯು ಅದು ಗೊತ್ತಾದ ನಂತರ ಈ ದಾವೆ ದಾಖಲಿಸಿದ್ದೇನೆ ಎಂದು ನುಡಿಯುತ್ತಾರೆ.

4. ನನ್ನ ತಂದೆ ತಮ್ಮ ಜೀವಿತಾವದಿಯಲ್ಲಿ ನಮ್ಮೊಂದಿಗೆ ಇದ್ದರು. ನಿಮ್ಮ ತಂದೆ ತಮ್ಮ ಜೀವಿತಾವದಿಯಲ್ಲಿ 12 ರಿಂದ 18 ನೇ ಪ್ರತಿವಾದಿಯರ ಅಥವಾ ಅವರ ತಾಯಿಯ

ವಿರುದ್ಧ ದಾವೆ ದಾಖಲು ಮಾಡಿರಲಿಲ್ಲ ಎಂದರೆ ಸಾಕ್ಷಿಯು ಮಾಡಿದ್ದರು ಎಂದು ನುಡಿಯುತ್ತಾರೆ. ನಿಮ್ಮ ತಂದೆ ಚಂದಮ್ಮ ರವರಿಗೆ ಖರೀದಿ ಪತ್ರ ಮಾಡಿಕೊಟ್ಟಿಲ್ಲ ಎಂದು ವಾದ ಪತ್ರದಲ್ಲಿ ಬರೆಸಿದ್ದೀರಾ ಎಂದರೆ ಸಾಕ್ಷಿಯು ಬರೆಸಿದ್ದೇನೆ ಎಂದು ನುಡಿಯುತ್ತಾರೆ.

5. 1997 ರಲ್ಲಿ ದಾವಾ ಜಮೀನಿನ ಮಾರುಕಟ್ಟೆ ಬೆಲೆ ಕಡಿಮೆ ಇತ್ತು ಎಂದರೆ ಸರಿ. ಯಾದಗಿರಿ ಜಿಲ್ಲೆಯಾದ ನಂತರ ಜಮೀನುಗಳ ಬೆಲೆ ಹೆಚ್ಚಾಗಿದ್ದು 2013 ರಲ್ಲಿ ದಾವಾ ಜಮೀನಿನ ಪ್ರತೀ ಎಕರೆಯ ಬೆಲೆ ರೂ.10 ಲಕ್ಷ ಆಗಿತ್ತು ಎಂದರೆ ಸರಿ. ಚಂದಮ್ಮ ರವರಿಗೆ ಜಮೀನು ಮಾರಾಟ ಮಾಡಿರುವ ಬಗ್ಗೆ ನನಗೆ ಹಾಗೂ 1 ರಿಂದ 8 ನೇ ಪ್ರತಿವಾದಿಯರಿಗೆ ಎಲ್ಲರಿಗೂ ಮಾಹಿತಿ ಇತ್ತು ಎಂದರೆ ಸರಿಯಲ್ಲ. ಮಾರಾಟವಾದ 16 ವರ್ಷಗಳ ಜಮೀನು ಬೆಲೆ ಹೆಚ್ಚಾಗಿರುವುದರಿಂದ ಪ್ರತಿವಾದಿಯರಿಂದ ಹೆಚ್ಚಿನ ಹಣ ಪಡೆದುಕೊಳ್ಳುವ ಉದ್ದೇಶದಿಂದ ನಾನು ಹಾಗೂ 1 ರಿಂದ 8 ನೇ ಪ್ರತಿವಾದಿಯರು ಶಾಮೀಲಾಗಿ ಈ ಸುಳ್ಳು ದಾವೆ ದಾಖಲು ಮಾಡಿದ್ದೇವೆ ಎಂದರೆ ಸರಿಯಲ್ಲ. ನಿಪಿ-9 ರಿಂದ 13 ರ ಪೋಟೋಗಳನ್ನು ಯಾವ ದಿನಾಂಕದಂದು ತೆಗೆದಿರುತ್ತೀರಿ ಎಂದರೆ ಸಾಕ್ಷಿಯು ನನಗೆ ಗೊತಿತಲ್ಲ ಎಂದು ನುಡಿಯುತ್ತಾರೆ. ಪೋಟೋಗಳಲ್ಲಿನ ಜಮೀನಿನ ಸರ್ವೆ ನಂಬರು ಪೋಟೊದಲ್ಲಿ ನಮೂದು ಇಲ್ಲ ಎಂದರೆ ಸರಿ. ಸುಳ್ಳು ಪೋಟೊಗಳನ್ನು ಸೃಷ್ಟಿ ಮಾಡಿಕೊಂಡು ಹಾಜರು ಮಾಡಿದ್ದೇನೆಂದರೆ ಸರಿಯಲ್ಲ. ದಾವಾ ಆಸ್ತಿಗಳು ಹಿರಿಯರ ಆಸ್ತಿಗಳಾಗಿದ್ದು ನಮ್ಮ ನಡುವೆ ಪಾಲು ಆಗಿಲ್ಲ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಹಾಗೂ 1 ರಿಂದ 8 ನೇ ಪ್ರತಿವಾದಿಯರು ದಾವಾ ಆಸ್ತಿಗಳ ಜಂಟಿ ಸ್ವಾದೀನದಲ್ಲಿ ಇದ್ದೇವೇ ಎಂದು ಸುಳ್ಳು ಸಾಕ್ಷ ನುಡಿಯುತ್ತಿದೇವೆಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು ಯಾದಗಿರಿ